MC No.37/2023

RW-3

**(ಇಂದು ದಿಃ 05-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಂದುವರೆದ ಮುಖ್ಯ ವಿಚಾರಣೆಃ- ಎದುರುದಾರರ ಪರ ಶ್ರೀ. ಆರ್ ಎಮ್ ವಕೀಲರಿಂದಃ-**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರತಿಜ್ಞಾ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ತಿಳುವಳಿಕೆಯ ಮೇರೆಗೆ ಬರೆಯಲ್ಪಟ್ಟಿರುತ್ತವೆ ಮತ್ತು ಅವು ಸತ್ಯವಾಗಿರುತ್ತವೆ. ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡಿರುತ್ತೇನೆ.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**ಪಾಟೀ ಸವಾಲುಃ- ಅರ್ಜಿದಾರರ ಪರ ಶ್ರೀ. ಎನ್.ಆರ್. ವಕೀಲರಿಂದಃ-**

ಮದುವೆಯಾದ 2 ತಿಂಗಳಿಗೆ ಎದುರುದಾರಳನ್ನು ಅವಳ ತಾಯಿ ಮಳಿಖೇಡ ಆಸ್ಪತ್ರೆಗೆ ಹೊಟ್ಟೆ ನೋವಿನ ಸಲುವಾಗಿ ತೋರಿಸಲು ಹೋದಾಗ ಎದುರುದಾರಳು ಗರ್ಭವತಿ ಇದ್ದಾರೆ ಎಂದು ವೈದ್ಯರು ಹೇಳಿದರು ಎಂದು ಎದುರುದಾರರು ಅರ್ಜಿದಾರರಿಗೆ ತಿಳಿಸಿದರು ಎಂದರೆ ನನಗೆ ಗೊತ್ತಿಲ್ಲ, ಎದುರುದಾರರು ಗರ್ಭವತಿಯಾಗಿರುವ ಸಂಗತಿ ಮಗು ಜನಿಸಿದ ಮೇಲೆ ಗೊತ್ತಾಗಿದೆ. ಎದುರುದಾರರ ಮನೆಯಿಂದ ನಮ್ಮ ಮನೆ 50 ಮೀಟರ್ ದೂರದಲ್ಲಿದೆ. ಗ್ರಾಮದಲ್ಲಿ ಮಹಿಳೆ ಗರ್ಭವತಿಯಾದರೆ ಗೊತ್ತಾಗುತ್ತದೆ ಎಂದರೆ ಸರಿಯಲ್ಲ, ಹಳ್ಳಿಗಳಲ್ಲಿ ಮದುವೆ ನಿಚ್ಛಯ ಆದ ನಂತರ ಹುಡಗ ಹುಡಗಿ ಭೇಟಿ ಆಗುವುದಿಲ್ಲ ಎಂದರೆ ಸರಿಯಲ್ಲ, ಎದುರುದಾರರು ಬೇರೆ ವ್ಯಕ್ತಿಯಿಂದ ಗರ್ಭವತಿಯಾಗಿದ್ದರಿಂದ ತಾನು ಗರ್ಭಿಣಿಯಾದ ಸಂಗತಿಯನ್ನು ಗಂಡನಿಗೆ ಮತ್ತು ಬೇರೆಯವರಿಗೆ ಹೇಳಿಲ್ಲ ಎಂದರೆ ಸರಿಯಲ್ಲ, ಮದುವರೆ ನಿಚ್ಛಯವಾದ ನಂತರ ಅರ್ಜಿದಾರ ಎದುರುದಾರಳ ಬಳಿ ಹೋಗಿಲ್ಲ ಎಂದರೆ ಸರಿಯಲ್ಲ, ನಾನು ಎದುರುದಾರರ ಮನೆಯ ಪಕ್ಕ ಇರುವ ಕಾರಣ ಅವಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**